**ಬಹಳಷ್ಟು ವಿವಾದಗಳಲ್ಲಿ ಸಿಕ್ಕಿ ಬಿದ್ದಿದ್ದ ಜೇಮ್ಸ್ ಡಿ. ವ್ಯಾಟ್ಸನ್ ಅವರು ಜಗತ್ತು ಕಂಡ ಅಪರೂಪದ ವಿಜ್ಞಾನಿ. ಜೆನೆಟಿಕ್ ರಂಗಕ್ಕೆ ಅವರು ನೀಡಿದ ಕೊಡುಗೆಯನ್ನು ಯಾರೂ ಮರೆಯುವಂತಿಲ್ಲ. ತಮ್ಮ ವೃತ್ತಿಯಲ್ಲಿ ಮೇಲೇರಲು ಮತ್ತೊಬ್ಬ ವಿಜ್ಞಾನಿಯ ದತ್ತಾಂಶಗಳನ್ನು ಅವರ ಅನುಮತಿಯಿಲ್ಲದೆ ಬಳಸಿಕೊಂಡಿದ್ದ ಜೇಮ್ಸ್, ತಮ್ಮ 97ನೇ (ನಿಧನ: 2025ರ ನ. 6) ವಯಸ್ಸಿನಲ್ಲಿ ತೀರಿಕೊಂಡರು.**



### 'ಜೆನೆಟಿಕ್ ಯುಗ'ದ ಆರಂಭ

ನವೆಂಬರ್ 6, 2025ರಂದು ತಮ್ಮ 97ನೇ ವಯಸ್ಸಿನಲ್ಲಿ ತೀರಿಕೊಂಡ ಜೇಮ್ಸ್ ಡಿ. ವ್ಯಾಟ್ಸನ್ ಜೆನೆಟಿಕ್ ರಂಗದ ಅಭಿವೃದ್ಧಿಗೆ ಕಾರಣರಾಗಿ ಪ್ರಸಿದ್ಧರಾದವರು. ವ್ಯಾಟ್ಸನ್ ಬಹಳಷ್ಟು ವಿವಾದಗಳಲ್ಲಿ ಸಿಕ್ಕಿ ಬಿದ್ದ ಜೀವವಿಜ್ಞಾನಿಯೂ ಹೌದು. ಇವರು 6 ಏಪ್ರಿಲ್ 1928ರಂದು ಶಿಕಾಗೋದಲ್ಲಿ ಜನಿಸಿದರು. ಶಿಕಾಗೋ ವಿಶ್ವವಿದ್ಯಾಲಯದಲ್ಲಿ 1947ರಲ್ಲಿ ಪ್ರಾಣಿಶಾಸ್ತ್ರದಲ್ಲಿ ಪದವಿ ಪಡೆದರು. ಇಂಡಿಯಾನ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಪಡೆದು, ಅಲ್ಲಿ ಜೆನಿಟಿಕ್ಸ್ ರಂಗದತ್ತ ತಮ್ಮ ಸಂಶೋಧನೆಯನ್ನು ಕೇಂದ್ರೀಕರಿಸಿದರು. 1951ರಲ್ಲಿ ಕೇಂಬ್ರಿಡ್ಜ್‌ನ ಕ್ಯಾವೆಂಡಿಷ್ ಪ್ರಯೋಗಶಾಲೆಯಲ್ಲಿ ಅವರು ಫ್ರಾನ್ಸಿಸ್ ಕ್ರಿಕ್ ಅವರನ್ನು ಭೇಟಿಯಾದರು. ಅವರಿಬ್ಬರ ಸಹಸಂಶೋಧನೆ ಡಿ.ಎನ್.ಎ.ಯ 'ರಚನಾ ರಸಾಯನಶಾಸ್ತ್ರದತ್ತ' ಕೇಂದ್ರೀಕರಿಸಿತ್ತು.

1951ರ ಸುಮಾರಿಗೆ ನಮ್ಮ ಜೀವಕೋಶದಲ್ಲಿರುವ ವರ್ಣತಂತುಗಳಲ್ಲಿ ಕಾಣಬರುವ ದಾರದಂತಹ ಡಿ.ಎನ್.ಎ. ನಮ್ಮ ವಂಶವಾಹಿ ಸಂಕೇತಗಳನ್ನು ಪೀಳಿಗೆಯಿಂದ ಪೀಳಿಗೆಗೆ ಕೊಂಡೊಯ್ಯುತ್ತದೆಂದು ವಿಜ್ಞಾನಿಗಳಿಗೆ ತಿಳಿದುಬಂದಿತ್ತು. ಆದರೆ ತನ್ನನ್ನು ತಾನೇ ನಕಲು ಮಾಡಿಕೊಳ್ಳಬಲ್ಲ ಈ ಡಿ.ಎನ್.ಎ. ಅಣುವಿನ ರಚನೆ ನಿಗೂಢವಾಗಿ ಉಳಿದಿತ್ತು. ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಮಾರಿಸ್ ವಿಲ್ಕಿನ್ಸ್ ಮತ್ತು ರೋಸಲಿಂಡ್ ಫ್ರಾಂಕ್ಲಿನ್ ಇದೇ ಸಮಸ್ಯೆಯನ್ನು ಬಗೆಹರಿಸುವತ್ತ ತೊಡಗಿದ್ದರು. 1951ರಲ್ಲಿ ಆತುರ, ಅವಸರದಲ್ಲಿ ವ್ಯಾಟ್ಸನ್ ಮತ್ತು ಕ್ರಿಕ್ ಡಿ.ಎನ್.ಎ. ರಚನೆಯನ್ನು ಕುರಿತು ಬರೆದ ವೈಜ್ಞಾನಿಕ ಪ್ರಬಂಧ ಎಷ್ಟು ಹಾಸ್ಯಾಸ್ಪದವಾಗಿತ್ತೆಂದರೆ ಬಲು ಪೇಚಾಟಕ್ಕೆ ಸಿಕ್ಕಿಸಿ, ಕಿರಿಕಿರಿಗೊಂಡ ಪ್ರಯೋಗಶಾಲೆಯ ನಿರ್ದೇಶಕರಾದ ಸರ್ ಲಾರೆನ್ಸ್ ಬ್ರಾಗ್ 'ಡಿ.ಎನ್.ಎ.ಯ ತಂಟೆಗೆ ಹೋಗಬೇಡಿ' ಎಂದು ಆಜ್ಞಾಪಿಸಿದ್ದರು! ಆದರೆ ರೋಸಲಿಂಡ್ ಅವರ ದತ್ತಾಂಶಗಳ ಸಹಾಯದಿಂದ 1953ರಲ್ಲಿ ವ್ಯಾಟ್ಸನ್ ಮತ್ತು ಕ್ರಿಕ್ ಡಿ.ಎನ್.ಎ.ಯ ಜೋಡಿ ಸುರುಳಿ ರಚನೆಯನ್ನು ಕಂಡುಹಿಡಿದರು.

ರೋಸಲಿಂಡ್ ಫ್ರಾಂಕ್ಲಿನ್



ಪರಿಶ್ರಮದಿಂದ ತಯಾರಿಸಿದ ಸಂಶೋಧನಾ ಚಿತ್ರಗಳನ್ನು, ದತ್ತಾಂಶಗಳನ್ನು ಆಕೆಯ ಅನುಮತಿ ಇಲ್ಲದೆಯೇ ಪಡೆದು, ಅವುಗಳ ಆಧಾರದ ಮೇಲೆ 'ಜೋಡಿ ಸುರುಳಿ' ರಚನೆಯನ್ನು 1953ರಲ್ಲಿ ವ್ಯಾಟ್ಸನ್ ಮತ್ತು ಫ್ರಾನ್ಸಿಸ್ ಕ್ರಿಕ್ ಕಂಡು ಹಿಡಿದಿದ್ದರು; ಅವರಿಗೆ 1962ರಲ್ಲಿ ನೊಬೆಲ್ ಪಾರಿತೋಷಿಕ ದೊರೆತಿತ್ತು. ಅಷ್ಟರಲ್ಲಿ ಕ್ಯಾನ್ಸರಿನಿಂದ ತೀರಿಕೊಂಡಿದ್ದ ರೋಸಲಿಂಡ್ ಬಹುತೇಕ ಅಜ್ಞಾತರಾಗಿ ಉಳಿದರು. ತಮ್ಮ ಸಂಶೋಧನೆಯ ಯಶಸ್ಸಿಗೆ ಮೂಲ ಕಾರಣವಾದ ರೋಸಲಿಂಡ್ ಅವರ ದತ್ತಾಂಶಗಳಿಗೆ ಕೃತಜ್ಞತೆ ವ್ಯಕ್ತಪಡಿಸುವ ಬದಲು, ವ್ಯಾಟ್ಸನ್ 1968ರಲ್ಲಿ ತಾವು ಬರೆದ 'ದಿ ಡಬಲ್ ಹೆಲಿಕ್ಸ್' ಪುಸ್ತಕದಲ್ಲಿ ಅತಿಸೂಕ್ಷ್ಮ ಸುಳ್ಳುಗಳನ್ನು ಹೆಣೆದು ರೋಸಲಿಂಡ್ ಅವರನ್ನು ಹಟಮಾರಿ ಹೆಣ್ಣಾಗಿ ಚಿತ್ರಿಸಿದರು.

ವ್ಯಾಟ್ಸನ್ ತಮ್ಮ ವೃತ್ತಿಯಲ್ಲಿ ಮೇಲೇರಲು ಮತ್ತೊಬ್ಬ ವಿಜ್ಞಾನಿಯ ದತ್ತಾಂಶಗಳನ್ನು ಆಕೆಯ ಅನುಮತಿಯಿಲ್ಲದೆ ಬಳಸಿಕೊಂಡಿದ್ದರು. ಈ ಪುಸ್ತಕದ ಬಗ್ಗೆ ಕ್ರಿಕ್ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಈ ಸಂಶೋಧನೆಯ ನಂತರ ಅವರು ವ್ಯಾಟ್ಸನ್‌ನಿಂದ ಬೇರ್ಪಟ್ಟಿದ್ದರು.